# ಪ್ರಶ್ನೆ:

# “ಕೃಪೆಯಿಂದ ಬಿದ್ದು ಹೋಗುವುದು ಸಾಧ್ಯವಾಗಿದ್ದರೆ, ಕ್ರೈಸ್ತನಿಗೆ ಯಾವುದೇ ಭರವಸೆ ಇರುವುದು ಹೇಗೆ?”

## ಉತ್ತರ:

ಕ್ರೈಸ್ತನು ಕೃಪೆಯಿಂದ ಬಿದ್ದು ಹೋಗಬಹುದು ಎಂದು ನಾವು ಬೋಧಿಸುತ್ತೇವೆ. ಕ್ರೈಸ್ತನಿಗೆ ಬಿದ್ದು ಹೋಗುವುದು ಅಸಾಧ್ಯವೆಂದು ಇತರ ಅನೇಕರು ಬೋಧಿಸುತ್ತಾರೆ. ಒಂದು ಪ್ರಸಿದ್ಧ ಸಭಾಪಂಗಡದ ಸ್ಥಳಿಕ ಸಭೆಯು ತನ್ನ ವಿಶ್ವಾಸಿಗಳ ಯಾದಿಯಲ್ಲಿ ಈ ಹೇಳಿಕೆಯನ್ನು ಒಳಗೊಂಡಿತ್ತು: “ವಿಶ್ವಾಸಿಯ ನಿತ್ಯವಾದ ಭದ್ರತೆಯಲ್ಲಿ ... ನಾವು ನಂಬುತ್ತೇವೆ; ದೇವರ ಕುಟುಂಬದಲ್ಲಿ ಜನಿಸಿದವನು ಎಂದಾದರೂ ತಪ್ಪಿಹೋಗುವುದು ಅಸಾಧ್ಯವಾದದ್ದಾಗಿದೆ.” ಧರ್ಮಭ್ರಷ್ಟತೆಯ ಅಸಾಧ್ಯತೆಯಲ್ಲಿ ನಂಬುವ ಜನರು ಈ ರೀತಿಯಲ್ಲಿ ಕೇಳಬಹುದು: “ಹೊಸದಾಗಿ ಹುಟ್ಟಿದವನು ಪರಲೋಕದಲ್ಲಿಯ ತನ್ನ ಮನೆಯನ್ನು ಕಳೆದುಕೊಂಡರೆ, ನಿನಗೆ ರಕ್ಷಣೆಯೂ ಭರವಸೆಯೂ ಹೇಗಿರುವುದು?”

ಬಿದ್ದು ಹೋಗುವುದರ ಸಾಧ್ಯತೆಯೂ ಸಹ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂಬುದರ ಬಗ್ಗೆ ನಾವು ಹೇಗೆ ಭರವಸೆಯುಳ್ಳವರಾಗಿರಬೇಕೆಂದು ಆಶ್ಚರ್ಯಪಡಲು ನಡಿಸಬಹುದು. “Blessed Assurance” ಎಂದು ನಾವು ಹಾಡುತ್ತೇವೆ, ಆದರೆ ನಮಗೆ ಭರವಸೆಗಿಂತ ಹೆಚ್ಚು ಸಂಶಯಗಳಿರಬಹುದು. “ನಾನು ಮಾಡಿದ ಪಾಪಗಳನ್ನು ದೇವರು ಕ್ಷಮಿಸಬಹುದೋ?”; “ರಕ್ಷಿಸಲ್ಪಡಲಿಕ್ಕೆ ನಾನು ಸಾಕಷ್ಟನ್ನು ಮಾಡುತ್ತಿರುವೆನೋ?”; “ನಾನು ಈಗಲೇ ಸತ್ತು ಹೋಗುವುದಾದರೆ, ನಾನು ಪರಲೋಕಕ್ಕೆ ಹೋಗುವೆನೋ?” ಎಂದು ನಾವು ಆಶ್ಚರ್ಯ ಪಡಬಹುದು. ನಾವು ಪರಲೋಕಕ್ಕೆ ಹೋಗುವೆವೋ ಇಲ್ಲವೋ ಎಂದು ಪ್ರಶ್ನಿಸಲ್ಪಟ್ಟರೆ, ಬಹುಶಃ ನಾವು “ನಾನು ಹೋಗುವನೆಂದು ನಿರೀಕ್ಷಿಸುತ್ತೇನೆ” ಇಲ್ಲವೇ “ಹಾಗೆಂದು ನಾನು ಯೋಚಿಸುತ್ತೇನೆ” ಎಂದು ಹೇಳಬಹುದು. ನಮ್ಮ ಭಾಷೆಯು ಯಾವುದೇ ನಿಜವಾದ ಭರವಸೆಯನ್ನು ಪ್ರತಿಬಿಂಬಿಸುವದಿಲ್ಲ.

ಧರ್ಮ ಭ್ರಷ್ಟತೆಯು ಸಾಧ್ಯವೆಂದು ನಂಬುವದರಿಂದ, ಅಂಥ ಭಾವನೆಗಳನ್ನು ನಾವು ಹೇಗೆ ಜಯಿಸಬಹುದು? ನಮಗೆ ಹೇಗೆ ಭರವಸೆ ಇರಬಹುದು?

### ಕ್ರೈಸ್ತರು ಕೃಪೆಯಿಂದ ಬಿದ್ದುಹೋಗಬಹುದು

ಕ್ರೈಸ್ತರು ಕೃಪೆಯಿಂದ ಬಿದ್ದುಹೋಗಬಹುದು. ನಾವು ಯಾಕೆ ಹಾಗೆ ಹೇಳುತ್ತೇವೆ? ಯಾಕಂದರೆ ಬೈಬಲ್ ಹಾಗೆ ಹೇಳುತ್ತದೆ.

*ಕೃಪೆಯಿಂದ ಬೀಳುವುದು ಒಂದು ಸಾಧ್ಯತೆಯಾಗಿದೆ.* ಕ್ರೈಸ್ತರು ಕೃಪೆಯಿಂದ ಬಿದ್ದು ಹೋಗುವದರ ವಿರುದ್ಧವಾಗಿ ಎಚ್ಚರಿಕೆ ಕೊಡಲ್ಪಟ್ಟಿದ್ದಾರೆ: "ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ" (1 ಕೊರಿಂಥ 10:12). ಪೌಲನೂ ಸಹ ತಾನು ಬೀಳಬಹುದೆಂದು ಹೇಳಿದನು (1 ಕೊರಿಂಥ 9:27).

*ಕೃಪೆಯಿಂದ ಬಿದ್ದುಹೋಗುವುದು ನಿಜವಾದ ಮತ್ತು ಉಗ್ರವಾದ ಗಂಡಾಂತರ ವಾಗಿದೆ:* "ಒಂದುಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪರಿಶುದ್ಧಾತ್ಮನ ವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನು ಅನುಭವಿಸಿದವರು ಭ್ರಷ್ಟರಾದರೆ ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ ..." (ಇಬ್ರಿಯ 6:4-6). ಈ ಜನರು ಬಿದ್ದು ಹೋಗುವದಕ್ಕಿಂತ ಮೊದಲೇ ರಕ್ಷಿಸಲ್ಪಟ್ಟಿದ್ದರು. ಅವರು ಜ್ಞಾನಪ್ರಕಾಶದಲ್ಲಿ ಸೇರಿಸಲ್ಪಟ್ಟಿದ್ದರು, ಪರಿಶುದ್ಧಾತ್ಮ ವರದಲ್ಲಿ ಪಾಲುಗಾರರಾಗಿದ್ದರು - ಮತ್ತು ಅದು ಕ್ರೈಸ್ತರಾಗಿರುವವರ ಇಲ್ಲವೇ ಕ್ರೈಸ್ತರಾಗಿದ್ದವರ ಬಗ್ಗೆ ಮಾತ್ರವೇ ಹೇಳಲ್ಪಡಬಹುದು.

*ಕೃಪೆಯಿಂದ ಬಿದ್ದು ಹೋಗುವುದು ಒಂದು ವಾಸ್ತವಾಂಶವಾಗಿದೆ.* ಗಲಾತ್ಯ 5:4 ಹೀಗೆ ಹೇಳುತ್ತದೆ, "ನಿಮ್ಮಲ್ಲಿ ಯಾರಾರು ಧರ್ಮಶಾಸ್ತ್ರದಿಂದ ನೀತಿವಂತರಾಗ ಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು. ಕೃಪಾಶ್ರಯದೊಳಗಿಂದ ಬಿದ್ದುಹೋದರು" ಇದು ಕೇವಲ ಸಾಧ್ಯತೆಯನ್ನಲ್ಲ, ಆದರೆ ಒಂದು ವಾಸ್ತವಿಕತೆಯನ್ನು ಪ್ರತಿಬಿಂಬಿಸುತ್ತದೆ. ಇದು ಕೆಲವರಿಗೆ ಸಂಭವಿಸುತ್ತದೆ!

*ಕೃಪೆಯಿಂದ ಬಿದ್ದು ಹೋಗುವುದು ನಾಶನಕ್ಕೆ ನಡಿಸುತ್ತದೆ.* "ನನ್ನ ಸಹೋದರರೇ, ನಿಮ್ಮಲ್ಲಿ ಒಬ್ಬನು ಸತ್ಯಮಾರ್ಗವನ್ನು ತಪ್ಪಿಹೋಗಿರಲಾಗಿ ಮತ್ತೊಬ್ಬನು ಅವನನ್ನು ಸನ್ಮಾರ್ಗಕ್ಕೆ ತಂದರೆ - ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಬಹು ಪಾಪಗಳನ್ನು ಮುಚ್ಚಿದವನಾದನೆಂದು ತಿಳಿಯಿರಿ" (ಯಾಕೋಬ 5:19, 20) ಎಂದು ಯಾಕೋಬನು ಹೇಳುತ್ತಾನೆ. ಯಾಕೋಬನು ಕ್ರೈಸ್ತರಿಗೆ (ಸಹೋದರರಿಗೆ) ಬರೆಯುತ್ತಾ ಇದ್ದನು. ಕ್ರೈಸ್ತರು ಪಾಪ ಮಾಡಬಹುದು (ಸತ್ಯಮಾರ್ಗದಿಂದ ತಪ್ಪಿಹೋಗಬಹುದು); ಅವರು ಮಾರ್ಪಡಿಸಲ್ಪಡಬಹುದು ಇಲ್ಲವೇ ಬದಾಲಾಯಿಸಲ್ಪಡಬಹುದು ಎಂದು ಅವನು ಹೇಳಿ ದನು. ಅದು ಸಂಭವಿಸಿದರೆ, ಒಬ್ಬನು ಪಾಪಮಾಡಿದ ಆ ಪಾಪಿಯನ್ನು ಮರಣದಿಂದ ತಪ್ಪಿಸುವವನಾಗುವನು. ಆದುದರಿಂದ, ಅವನ ಪಾಪವು ಅವನನ್ನು ಮರಣಕ್ಕೆ ದಂಡಿಸಿದೆ.

ಕ್ರೈಸ್ತರು ಪಾಪಮಾಡಬಹುದು; ಅವರು ಬಿದ್ದುಹೋಗಬಹುದು; ನಿತ್ಯವಾಗಿ ತಪ್ಪಿಹೋಗುವಂಥ ರೀತಿಯಲ್ಲಿ ಅವರು ಪಾಪಮಾಡಬಹುದು. ಧರ್ಮ ಭ್ರಷ್ಟತೆಯು ನಿಜವಾದ ಸಾಧ್ಯತೆಯಾಗಿದೆ.

## ಕ್ರೈಸ್ತರಿಗೆ ಭರವಸೆ ಇರಬಹುದು

ನಮಗೆ ಭರವಸೆಯಿರಬಹುದು, *ಮೊದಲನೆಯದಾಗಿ, ಯಾಕಂದರೆ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂಬ ನಿಶ್ಚಿತತೆಯುಳ್ಳವರಾಗಿದ್ದೇವೆ.* ಹೊಸ ಒಡಂಬಡಿಕೆಯಲ್ಲಿ ರಕ್ಷಣೆಯ ಮಾರ್ಗವು ಸರಳವಾಗಿದೆ. ನಾವು ಕೃಪೆಯಿಂದ (ಎಫೆಸ 2:8, 9), ಕ್ರಿಸ್ತನ ರಕ್ತದ ಮುಖಾಂತರ (ಎಫೆಸ 1:7) ನಾವು ರಕ್ಷಿಸಲ್ಪಟ್ಟಿದ್ದೇವೆ. ರಕ್ಷಿಸಲ್ಪಡಲು ಯೇಸುವು ದೇವರ ಕುಮಾರನಾಗಿದ್ದಾನೆ ಮತ್ತು ನಮ್ಮ ಕರ್ತನಾಗಿದ್ದಾನೆ ಹಾಗೂ ಆತನಲ್ಲಿ ನಮ್ಮ

ವಿಶ್ವಾಸವನ್ನು ಅರಿಕೆಮಾಡಲು ಮನಸುಳ್ಳವರಾಗಿದ್ದೇವೆ ಎಂದು ನಾವು ನಂಬತಕ್ಕದ್ದು (ರೋಮಾಪುರ 10:9, 10). ನಾವು ಮಾನಸಾಂತರ ಪಡತಕ್ಕದ್ದು, ಇಲ್ಲವೇ ನಮ್ಮ ಪಾಪಗಳಿಂದ ತಿರುಗಿಕೊಳ್ಳಬೇಕು (ಲೂಕ 13:3; ಅಪೊಸ್ತಲರ ಕೃತ್ಯಗಳು 17:30) ಮತ್ತು ಆಗ ರಕ್ಷಿಸಲ್ಪಡಲು ಬಾಪ್ತಿಸ್ಮ ಹೊಂದತಕ್ಕದ್ದು (ಅಪೊಸ್ತಲರ ಕೃತ್ಯಗಳು 2:38; 22:16).

ಅದನ್ನು ಮಾಡಿದ ಮೇಲೆ, ನಾವು ರಕ್ಷಿಲ್ಪಟ್ಟಿದ್ದೇವೆ ಎಂದು ನಿಶ್ಚಿತತೆಯುಳ್ಳವರಾಗಿರಬಹುದು. ಬಾಪ್ತಿಸ್ಮವು ನಂಬಿಕೆ ಮತ್ತು ಮಾನಸಾಂತರವನ್ನು ಅನುಸರಿಸಿ, ಪಾಪಗಳ ಪರಿಹಾರದಲ್ಲಿ ಪರಿಣಾಮಗೊಳ್ಳುವುದು (ಅಪೊಸ್ತಲರ ಕೃತ್ಯಗಳು 2:38) ... ಪಾಪಗಳು ತೊಳೆಯಲ್ಪಡುವವು (ಅಪೊಸ್ತಲರ ಕೃತ್ಯಗಳು 22:16) ... ರಕ್ಷಿಸಲ್ಪಡುವರು (1 ಪೇತ್ರ 3:21) ... ಕ್ರಿಸ್ತನೊಳಗೆ ಪ್ರವೇಶಿಸಿ, ಕ್ರಿಸ್ತನನ್ನು ಧರಿಸಿಕೊಳ್ಳುವುದು (ಗಲಾತ್ಯ 3:27).

ಹೊಸ ಒಡಂಬಡಿಕೆಯ ಬರಹಗಾರರು ಕ್ರೈಸ್ತರನ್ನು ಉದ್ದೇಶಿಸಿ ಬರೆದಾಗ, ಅವರು ಬರೆದ ಜನರು ರಕ್ಷಿಸಲ್ಪಟ್ಟದ್ದರ ಬಗ್ಗೆ ಅವರಿಗೆ ಎಳ್ಳಷ್ಟೂ ಸಂಶಯ ಇರಲಿಲ್ಲ. ಪೌಲನು ಗಲಾತ್ಯದವರಿಗೆ ಹೀಗೆ ಹೇಳಿದನು: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26, 27). ಕೊಲೊಸ್ಸೆಯವರಿಗೆ ಅವನು ಹೀಗೆ ಬರೆದನು, "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು" (ಕೊಲೊಸ್ಸೆ 1:13, 14). ತಾನು ಯಾರಿಗೆ ಬರೆದನೋ ಅವರು "ಹೊಸದಾಗಿ ಹುಟ್ಟಿದ್ದಾರೆ" ಎಂದು ಪೇತ್ರನು ಹೇಳಿದನು (1 ಪೇತ್ರ 1:3) ಮತ್ತು ಅನಂತರ, "ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡದ್ದರಿಂದ ... ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು" ಎಂದು ಕೂಡಿಸಿದನು (1 ಪೇತ್ರ 1:22, 23). ಯೋಹಾನನು ಹೀಗೆ ಬರೆದನು, "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ..." (1 ಯೋಹಾನ 3:1).

ತಾವು ರಕ್ಷಿಸಲ್ಪಟ್ಟಿದ್ದೇವೆ ಎಂಬ ಆ ರೀತಿಯ ಭರವಸೆಯು ಹೊಸ ಒಡಂಬಡಿಕೆಯ ಕ್ರೈಸ್ತರಿಗೆ ಇದ್ದರೆ, ಆಗ ನಮಗೂ ಸಹ ಅಂಥದ್ದೇ ಅದ ಭರವಸೆ ಇರತಕ್ಕದ್ದು. ನಾವು ಸುವಾರ್ತೆಗೆ ವಿಧೇಯರಾಗಿದ್ದರೆ - ನಾವು ನಂಬಿ ಮಾನಂಸಾಂತರ ಪಟ್ಟು, ನಮ್ಮ ವಿಶ್ವಾಸವನ್ನು ಅರಿಕೆ ಮಾಡಿ, ನಮ್ಮ ಪಾಪಗಳ ನಿವಾರಣೆಗಾಗಿ ಬಾಪ್ತಿಸ್ಮ ಮಾಡಿಸಿಕೊಂಡಿದ್ದರೆ - ಸಂಶಯವಿಲ್ಲದೆ ನಾವು ರಕ್ಷಿಸಲ್ಪಟ್ಟಿದ್ದೇವೆ! "ನಾನು ರಕ್ಷಿಸಲ್ಪಟ್ಟಿದ್ದೇನೆ ನಾನು ಹೊಸದಾಗಿ ಹುಟ್ಟಿದ್ದೇನೆ. ನಾನು ದೇವರ ಮಗುವಾಗಿದ್ದೇನೆ. ನಾನು ಸಭೆಯ ಸದಸ್ಯನೂ, ದೇವರ ರಾಜ್ಯದ ಪ್ರಜೆಯೂ ಅಗಿದ್ದೇನೆ" ಎಂದು ನಾವು ಹೇಳಬಹುದು.

ವಿಧೇಯತೆಯಲ್ಲಿ ನಾವೇನನ್ನಾದರೂ ಮಾಡಿದಾಗ ಒಂದು ಪ್ರತ್ಯೇಕವಾದ ಘಟನೆಯನ್ನು ತೋರಿಸಲು ಶಕ್ತರಾದಾಗ, ಮನುಷ್ಯರು "ಕೇವಲ ನಂಬಿಕೆಯಿಂದ" ರಕ್ಷಿಸಲ್ಪಡುವರು ಎಂದು ನಂಬುವವರ ಮೇಲೆ ನಿಮಗೆ ಹೆಚ್ಚಿನ ಅವಕಾಶವಿದೆ. ಒಬ್ಬ ವ್ಯಕ್ತಿಯು ಕ್ರಿಸ್ತನನ್ನು ಸ್ವೀಕರಿಸುವಾಗ ಇಲ್ಲವೇ "ತನ್ನ ಹೃದಯದಲ್ಲಿ ಕ್ರಿಸ್ತನನ್ನು ಆಮಂತ್ರಿಸುವಾಗ" ರಕ್ಷಿಸಲ್ಪಡುತ್ತಾನೆಂದು ಅನೇಕರಲ್ಲಿ ವಿಚಾರವಿದೆ. ಆದರೆ ಅವರು

ಒಂದು ಸಲ ರಕ್ಷಿಸಲ್ಪಟ್ಟರು ಎಂಬುದಕ್ಕೆ ಕೇವಲ ಪುರಾವೆಯೂ ಅವರು "ಕ್ರಿಸ್ತನನ್ನು ಸ್ವೀಕರಿಸಿದ" ಕ್ಷಣವನ್ನು ಜ್ಞಾಪಿಸಿಕೊಳ್ಳುವುದಾಗಿದೆ. ಹೀಗೆ ಕೆಲವರಿಗೆ - ತಾನು ಪಾಪಮಾಡಿದಾಗ, ಉದಾಹರಣೆಗಾಗಿ - ಮೊದಲಾಗಿ ತಾನು ರಕ್ಷಿಸಲ್ಪಟ್ಟಿದ್ದೇನೋ ಎಂಬುದರ ಬಗ್ಗೆ ಸಂಶಯಪಡುವುದು ಅನಂತರದಲ್ಲಿ ಸುಲಭವಾಗುತ್ತದೆ.

ಆದರೆ ನಾವು ನಿಜವಾಗಿಯೂ "ನಮ್ಮ ಹೃದಯಗಳಲ್ಲಿ ಕ್ರಿಸ್ತನನ್ನು ಸ್ವೀಕರಿಸಿದ್ದೇವೆಯೋ ಎಂಬುದರ ಬಗ್ಗೆ ನಿಶ್ಚಿತತೆಯಿಂದಿರಲು ಮರೆಯುತ್ತಿರುವ ನಮ್ಮ ನೆನಪುಗಳ ಮೇಲೆ ನಾವು ಅವಲಂಭಿಸಬೇಕಾಗಿಲ್ಲ"; ನಮ್ಮ ಜೀವನದಲ್ಲಿ ನಾವು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿ, ರಕ್ಷಿಸಲ್ಪಟ್ಟ ದಿನವನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ಆದುದರಿಂದ, ನಾವು ಸುವಾರ್ತೆಗೆ ವಿಧೇಯರಾದಾಗ ರಕ್ಷಿಸಲ್ಪಟ್ಟೆವು ಎಂಬ ಹೊಸ ಒಡಂಬಡಿಕೆಯ ಬೋಧನೆಯು, ಒಬ್ಬನು ಅವನು "ಕ್ರಿಸ್ತನನ್ನು ಸ್ವೀಕರಿಸುವಾಗ" ಇಲ್ಲವೇ "ತನ್ನ ಹೃದಯದಲ್ಲಿ ಕ್ರಿಸ್ತನನ್ನು ಆಮಂತ್ರಿಸುವಾಗ" ರಕ್ಷಿಸಲ್ಪಡುತ್ತಾನೆ ಎಂಬ ಬೈಬಲಿನದಾಗಿರದೇ ಇರುವ ದೃಷ್ಟಿಕೋನಕ್ಕಿಂತ ಹೆಚ್ಚಿನ ಭರವಸೆಯನ್ನು ಒದಗಿಸುತ್ತದೆ.

*ಎರಡನೆಯದಾಗಿ, ನಾವು ರಕ್ಷಿಸಲ್ಪಡುತ್ತಿದ್ದೇವೆ ಎಂಬ ನಿಶ್ಚಿತತೆಯು ಸ್ಥಿರವಾಗಿರುವದರಿಂದ ನಮಗೆ ಭರವಸೆ ಇರಬಹುದು.* ಕ್ರೈಸ್ತನು ಕೃಪೆಯಿಂದ ಬಿದ್ದು ಹೋಗಬಹುದೆಂದು ನಾವು ನಂಬುವದರಿಂದ, ಹಿಂದೆ ಯಾವಾಗಲೋ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂಬುದು ಇಂದು ನಮಗೆ ಅಗತ್ಯವಾಗಿರುವ ರೀತಿಯ ಭರವಸೆಯನ್ನು ಅದು ಒದಗಿಸುವದಿಲ್ಲ ಎಂಬುದನು ನಾವು ಒಪ್ಪಿಕೊಳ್ಳತಕ್ಕದ್ದು. ಹಿಂದಿನ ಒಂದು ಸಮಯದಲ್ಲಿ ನಾವು ರಕ್ಷಿಸಲ್ಪಟ್ಟಿರಬಹುದು ಆದರೆ ಇಂದು ತಪ್ಪಿಹೋಗಿರಬಹುದು. ಈಗಲೇ ನಾವು ರಕ್ಷಿಲ್ಪಟ್ಟಿದ್ದೇವೆ ಎಂಬುದನ್ನು ನಿಶ್ಚಯಿಸಿಕೊಳ್ಳಬಹುದು? ಕನಿಷ್ಠ ಪಕ್ಷ ಎರಡು ಕಾರಣಗಳಿಗಾಗಿ ಇಂದು ನಮಗೆ ಭರವಸೆ ಇರಬಹುದು.

*ನಮ್ಮನ್ನು ನಂಬಿಗಸ್ತರನ್ನಾಗಿಡಲಿಕ್ಕೆ ದೇವರು ಮಾಡಿದ್ದಕ್ಕಾಗಿ ನಮಗೆ ಭರವಸೆ ಇರಬಹುದು.* ಆತನಿಂದ ನಾವು ಬೆನ್ನು ಹಾಕಿ ಹೋಗಬೇಕೆಂದು ದೇವರು ಬಯಸುವದಿಲ್ಲ. ಆದುದರಿಂದ, ನಾವು ನಂಬಿಗಸ್ತರಾಗಿ ಉಳಿಯುವದಕ್ಕೆ ಆತನು ಪ್ರತಿಯೊಂದನ್ನು ನಮಗೆ ಒದಗಿಸುತ್ತಾನೆ. ಆತನು ತನ್ನ ಮಕ್ಕಳಿಗೆ ಇವುಗಳನ್ನು ಕೊಟ್ಟಿದ್ದಾನೆ.

*ಒಬ್ಬ ಪ್ರೀತಿಯುಳ್ಳ ತಂದೆಯನ್ನು.* "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ ..." (1 ಯೋಹಾನ 3:1).

*ನಮಗಾಗಿ ಬೇಡಿಕೊಳ್ಳಲು ಒಬ್ಬ ಸಹಾಯಕನನ್ನು.* "ಯಾವನಾದರೂ ಪಾಪಮಾಡಿದರೆ ತಂದೆಯ, ಬಳಿಯಲ್ಲಿ ನೀತಿವಂತನಾದ ಯೇಸುಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ" (1 ಯೋಹಾನ 2:1). ಕ್ರಿಸ್ತನು ತಂದೆಯೊಂದಿಗೆ ನಮ್ಮ ಮಧ್ಯಸ್ಥಗಾರನಾಗಿದ್ದಾನೆ (1 ತಿಮೊಥೆ 2:5).

*ಒಬ್ಬ ಪವಿತ್ರ ಅತಿಥಿಯನ್ನು.* "ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" (ಗಲಾತ್ಯ 4:6; ಹೋಲಿಸು ಅಪೊಸ್ತಲರ ಕೃತ್ಯಗಳು 2:38; 5:32). ಆಂತರ್ಯದಲ್ಲಿ ವಾಸಿಸುವ ಪರಿಶುದ್ಧಾತ್ಮನು ನಮ್ಮ ಬಾದ್ಯಸ್ಥಿಕೆಯ ಸಂಚಕಾರವಾಗಿ (ಎಫೆಸ 1:13, 14), ನಮ್ಮನ್ನು ಬಲಪಡಿಸಲು (ಎಫೆಸ 3:16) ಮತ್ತು ಆತ್ಮನ ಫಲವನ್ನು ಫಲಿಸಲು ಶಕ್ತರನ್ನಾಗಿ ಮಾಡಲು (ಗಲಾತ್ಯ 5:22, 23) ಕೊಡಲ್ಪಟ್ಟಿದ್ದಾನೆ.

*ಒಂದು ಪ್ರೋತ್ಸಾಹಿಸುವ ಅನ್ಯೋನ್ಯತೆ.* ದೇವರು ನಮ್ಮನ್ನು ಸಭೆಗೆ (ಅಪೊಸ್ತಲರ ಕೃತ್ಯಗಳು 2:47), ಅಸ್ತಿತ್ವದಲ್ಲಿರುವ ವಿಶ್ವಾಸಿಗಳ ಅನ್ಯೋನ್ಯತೆಗೆ, ಭಾಗವಾಗಿಯಾದರೂ, ಅದರ ಸದಸ್ಯರು ನಂಬಿಗಸ್ತರಾಗಿ ಉಳಿಯಲಿಕ್ಕೆ ಸಹಾಯ ಮಾಡಲು ಕೂಡಿಸಿದ್ದಾನೆ. ಸಭೆಯಲ್ಲಿ "ನಾವು ಒಂದಾಗಿ ಕೂಡಿಬರುವದನ್ನು ಬಿಟ್ಟುಬಿಡದೆ ಇರುವದರಿಂದ" ಹಾಗೂ "ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದರಿಂದ," "ಒಬ್ಬರನ್ನೊಬ್ಬರು ಪ್ರೀತಿಸುವದಕ್ಕೆ ಮತ್ತು ಒಳ್ಳೇ ಕಾರ್ಯಗಳನ್ನು ಮಾಡಲಿಕ್ಕೆ ಹೇಗೆ ಪ್ರೇರೇಪಿಸಬೇಕೆಂಬುದನ್ನು" ನಾವು ಯೋಚಿಸುತ್ತೇವೆ (ಇಬ್ರಿಯ 10:24, 25).

*ಒಂದು ಸಹಾಯಕವಾದ ಸಂದೇಶ.* "ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟು ಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತ ವಾಗಿರುವ ಆತನ ಕೃಪಾವಾಕ್ಯವನ್ನು" ಬೈಬಲ್ ಒಳಗೊಂಡಿರುತ್ತದೆ (ಅಪೊಸ್ತಲರ ಕೃತ್ಯಗಳು 20:32). ಯೇಸುವಿನಲ್ಲಿ ಅದ್ಭುತಕರವಾದ ಉದಾಹರಣೆಯೊಂದಿಗೆ, ಮತ್ತು ನೀತಿವಂತರಾಗಿ ಜೀವಿಸಲಿಕ್ಕೆ ಬಲವುಳ್ಳ ಪ್ರೇರಣೆಯೊಂದಿಗೆ ಅದು ನಮಗೆ ಸ್ಪಷ್ಟವಾದ ನಿರ್ದೇಶನಗಳನ್ನು ಒದಗಿಸುತ್ತದೆ.

*ಪಾರಲೌಕಿಕ ಸೇವಕರು.* ದೇವದೂತರು "ರಕ್ಷಣೆಯನ್ನು ಬಾಧ್ಯವಾಗಿ ಹೊಂದ ಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳಾಗಿದ್ದಾರೆ" (ಇಬ್ರಿಯ 1:14). ಅದು ನಮಗಾಗಿದೆ! ದೇವದೂತರು ನಮ್ಮ ಪರವಾಗಿ ಸೇವೆ ಮಾಡುತ್ತಾರೆ.

*ಪ್ರಾರ್ಥನೆಯ ಭಾಗ್ಯ.* "ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು; ಹುಡುಕಿರಿ, ನಿಮಗೆ ಸಿಕ್ಕುವುದು; ತಟ್ಟಿರಿ, ನಿಮಗೆ ತೆರೆಯುವುದು" ಎಂದು ಯೇಸು ನಮಗೆ ಹೇಳು ವನು (ಮತ್ತಾಯ 7:7; ಹೋಲಿಸು 1 ಯೋಹಾನ 5:15). ಕ್ರೈಸ್ತರಿಗೆ ಉತ್ತರಿಸಲ್ಪಟ್ಟ ಪ್ರಾರ್ಥನೆಯ ವಾಗ್ದಾನವಿದೆ!

ಅಮೂಲ್ಯವಾದ ವಾಗ್ದಾನಗಳು. ನಾವು ನಂಬಿಗಸ್ತರಾಗಿ ಉಳಿಯಲಿಕ್ಕೆ ನಮ್ಮನ್ನು ಪ್ರೋತ್ಸಾಹಿಸಲು ದೇವರು ನಮಗೆ ವಾಗ್ದಾನಗಳನ್ನು ಕೊಟ್ಟಿದ್ದಾನೆ - ಅವುಗಳಲ್ಲಿ, ಕ್ರೈಸ್ತರಿಗಾಗಿ ಎಲ್ಲಾ ಸಂಗತಿಗಳು ಒಳ್ಳೆಯದಕ್ಕಾಗಿ ಕಾರ್ಯಮಾಡುತ್ತವೆ ಎಂಬ ವಾಗ್ದಾನ (ರೋಮಾಪುರ 8:28), ನಮ್ಮ ಶಕ್ತಿಯಿಂದ ನಮ್ಮನ್ನು ಶೋಧಿಸಲಿಕ್ಕೆ ದೇವರು ಬಿಡುವದಿಲ್ಲ ಎಂಬ ವಾಗ್ದಾನ (1 ಕೊರಿಂಥ 10:13), ಮತ್ತು ದೇವರ ಪ್ರೀತಿಯಿಂದ ನಮ್ಮನ್ನು ಈ ಲೋಕದಲ್ಲಿ ಯಾವುದೂ ಅಗಲಿಸಲಾರದು ಎಂಬ ವಾಗ್ದಾನ (ರೋಮಾಪುರ 8:35-39) ಇರುವವು.

*ನಮಗೆ ಭರವಸೆಯಿರಬಹುದು ಯಾಕಂದರೆ ನಾವು ದೇವರ ಅಪ್ಪಣೆಗಳನ್ನು ಮೀರುವಾಗ, ದೇವರು ನಮ್ಮ ಕ್ಷಮಾಪಣೆಗಾಗಿ ಮಾರ್ಗಮಾಡಿರುವನು.*

ಒಂದು ರೀತಿಯಲ್ಲಿ ನಮ್ಮ ಸತತವಾದ ರಕ್ಷಣೆಯು ನಮ್ಮ ಮೇಲೆ ಅವಲಂಭಿಸಿರುತ್ತದೆ. ದೇವರ ಚಿತ್ತವನ್ನು ಮಾಡಲು ನಾವು ಮಾಡತಕ್ಕಷ್ಟು ಅತ್ಯುತ್ತಮವಾದದ್ದನ್ನು ಮಾಡುತ್ತಿರಬೇಕು. ಆದರೆ ಅದು ನಾವು ಸ್ವಂತವಾಗಿಯೇ ಕ್ರೈಸ್ತರಾಗಿದ್ದೇವೆ ಎಂಬ ಅರ್ಥಕೊಡುವುದೋ? ಇಲ್ಲ. ನಾವು ಆಸಕ್ತಿಯಿಂದ ಇರಲು, ಬುದ್ಧಿವಂತಿಕೆಯಿಂದ ಇರಲು ಹಾಗೂ ನಂಬಿಗಸ್ತಿಕೆಯಿಂದ ಇರಲು ಕರ್ತನು ಅಗತ್ಯವಾದ ಸಹಾಯವನ್ನು ಒದಗಿಸುವನು.

ಆದರೆ ನಮ್ಮ ಭರವಸೆಯು ನಾವು ನಂಬಿಗಸ್ತರಾಗಿ ಉಳಿಯಲು ದೇವರು ಮಾಡಿದ ವಿಷಯಗಳ ಮೇಲೆ ಅವಲಂಭಿಸಿರುವುದು ಮಾತ್ರವಲ್ಲದೇ, ಅದು ನಾವು ದೇವರ ಚಿತ್ತವನ್ನು ಮಾಡುವಲ್ಲಿ ಬಿದ್ದು ಹೋಗುವಾಗ ನಮ್ಮ ಕ್ಷಮಾಪಣೆಗಾಗಿ ಅತನು ಮಾಡಿದ ವಿಷಯಗಳ ಮೇಲೆಯೂ ಅವಲಂಭಿಸಿರುತ್ತದೆ. ವಿಶೇಷವಾಗಿ, ಯೇಸುವಿನ

ರಕ್ತವು ನಮ್ಮ ಪಾಪಗಳನ್ನು ತೊಳೆಯುವುದು ಎಂಬ ವಾಗ್ದಾನವು ನಮಗಿರುತ್ತದೆ: "ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ" (1 ಯೋಹಾನ 1:7). ನಾವು ಪಾಪ ರಹಿತವಾಗಿ ಜೀವಿಸುತ್ತಿರುವದರಿಂದ ಅಲ್ಲ, ಆದರೆ ನಮ್ಮನ್ನು ನಮ್ಮ ಪಾಪಗಳಿಂದ ಯೇಸುವಿನ ರಕ್ತವು ಸತತವಾಗಿ ಶುದ್ಧೀಕರಿಸುತ್ತಿರುವದರಿಂದ, ನಾವು ನಮ್ಮ ಇಂದಿನ ರಕ್ಷಣೆಯ ಬಗ್ಗೆ ನಿಶ್ಚಿತತೆಯುಳ್ಳವರಾಗಿರಬಹುದು!

ನಮ್ಮ ಪಾಪರಹಿತತೆಯ ಮೇಲೆ, ದೇವರ ನಿಯಮವನ್ನು ಪರಿಪೂರ್ಣವಾಗಿ ನಾವು ಅನುಸರಿಸುವದರ ಮೇಲೆ, ನಮ್ಮ ಸ್ವಂತ ನೀತಿಯ ಮೇಲೆ ನಾವು ಅವಲಂಭಿಸ ಬೇಕಾಗಿರುವದಿಲ್ಲ. ನಾವು ಹಾಗೆ ಮಾಡಿದ್ದರೆ, ನಮ್ಮಲ್ಲಿ ಯಾರೂ ರಕ್ಷಿಸಲ್ಪಡುವುದಿಲ್ಲ, ಯಾಕಂದರೆ ನಮ್ಮಲ್ಲಿ ಯಾರೂ ಪಾಪವಿಲ್ಲದೇ ಜೀವಿಸುವದಿಲ್ಲ. ನಮ್ಮ ಮೇಲೆಯೇ ನಾವು ಅವಲಂಭಿಸಲಾರೆವು. ಕ್ಷಮಾಪಣೆಗಾಗಿ ನಾವು ದೇವರ ಕೃಪೆಯ ಮೇಲೆ ಅವಲಂಭಿಸತಕ್ಕದ್ದು. ಆದರೆ, ಕೃಪೆಯು ನಮಗೆ ಲಭ್ಯವಿರುವದರಿಂದ ದೇವರಿಗೆ ಕೃತಜ್ಞತೆಗಳು. ನಾವು ಬೆಳಕಿನಲ್ಲಿ ನಡೆಯುವದನ್ನು ಮುಂದುವರಿಸಿದಾಗ ದೇವರ ಕೃಪೆಯಿಂದಲೂ ಯೇಸುವಿನ ರಕ್ತದಿಂದಲೂ ನಾವು ಸತತವಾಗಿ ರಕ್ಷಿಸಲ್ಪಡುತ್ತೇವೆ.

ಇದೆಲ್ಲರ ಅರ್ಥವೇನು? ಇದರ ಅರ್ಥ ನಾವು ಈಗಲೇ, *ಇಲ್ಲಿಯೇ ರಕ್ಷಿಸಲ್ಪಟ್ಟಿದ್ದೇವೆ ಎಂದು ನಾವು ತಿಳಿಯಬಹುದು. ನೀನು ರಕ್ಷಿಸಲ್ಪಟ್ಟಿದ್ದೀ ಎಂದು ಎಂದೂ ಹೇಳಲಾರದಂಥ ಭಾವನೆಯು ಹೊಸ ಒಡಂಬಡಿಕೆಯಿಂದ ಬರುವದಿಲ್ಲ*. ಯೋಹಾನನು ಹೀಗೆ ಬರೆದಿದ್ದಾನೆ, "ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ" (1 ಯೋಹಾನ 5:13). ಸ್ಪಷ್ಟವಾಗಿ, ಈ ವಾಗ್ದಾನವು ಶರತ್ತು ಇಲ್ಲದೇ ಇರುವದಿಲ್ಲ, ಆದರೆ, ಯೋಹಾನನ ಪ್ರಕಾರವಾಗಿ, ನಮಗೆ ನಿತ್ಯಜೀವ ಇರುವುದೆಂದು ನಾವು *ತಿಳಿಯಬಹುದು* ಎಂಬುದು ಸ್ಪಷ್ಟವಾಗಿದೆ; ಆದುದರಿಂದ, ನಾವು ಈಗಲೇ ರಕ್ಷಿಸಲ್ಪಟ್ಟಿದ್ದೇವೆ ಎಂದು *ತಿಳಿಯಬಹುದು.* "ನೀನು ರಕ್ಷಿಸಲ್ಪಟ್ಟಿದ್ದೀಯೋ?" ಎಂದು ಯಾರಾದರೂ ನಿನ್ನನ್ನು ಕೇಳಿದರೆ, ನೀನು ನಂಬಿಗಸ್ತಿಕೆಯಿಂದ ಜೀವಿಸಲಿಕ್ಕೆ ನಿನ್ನ ಉತ್ತಮವಾದದ್ದನ್ನು ಮಾಡುತ್ತಿದ್ದರೆ, "ನಿಶ್ಚಯವಾಗಿ! ನಾನು ರಕ್ಷಿಸಲ್ಪಟ್ಟಿದ್ದೇನೆಂದು ನಾನು ಬಲ್ಲೆನು!" ಎಂದು ಉತ್ತರ ಕೊಡಬಹುದು.

*ನಾವು ರಕ್ಷಿಸಲ್ಪಡುವೆವು ಎಂಬ ನಿಶ್ಚಿತತೆಯುಳ್ಳವರಾಗಿರುದರಿಂದ ನಮಗೆ ಭರವಸೆಯಿರಬಹುದು.* ಈಗ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ನಾವು ಈಗ ನಂಬಿದ್ದರೂ, ನಾವು ನಿತ್ಯವಾಗಿ ರಕ್ಷಿಸಲ್ಪಡುವೆವು ಎಂಬುದರ ಬಗ್ಗೆ ನಿಶ್ಚಿತತೆಯಿಲ್ಲದವರಾಗಿರಬಹುದು. "ನಾನು ಸಾಯುವಾಗ, ನಾನು ರಕ್ಷಿಸಲ್ಪಡುವೆನು," ಇಲ್ಲವೇ, "ನಾನು ಪರಲೋಕಕ್ಕೆ ಹೋಗುತ್ತೇನೆ. ಅದರ ಬಗ್ಗೆ ಸಂಶಯವೇ ಇಲ್ಲ" ಎಂದು ಹೇಳಲು ಹಿಂಜರಿಯಬಹುದು.

ಪೌಲನಿಗೆ ತನ್ನ ನಿತ್ಯ ರಕ್ಷಣೆಯ ಬಗ್ಗೆ ಯಾವುದೇ ಸಂಶಯವಿರಲಿಲ್ಲ. ಅವನು ತನ್ನ ಜೀವನದ ಅಂತ್ಯಕ್ಕೆ ಬರುವಾಗ, ಮಹಾಭರವಸೆಯಿಂದ ಅವನು ಹೀಗೆ ಹೇಳಿದನು,

> ... ನಾನು ಹೊರಟುಹೋಗಬೇಕಾದ ಸಮಯವು ಸಮೀಪಕ್ಕೆ ಬಂದಿದೆ. ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ; ನೀತಿವಂತರಿಗೆ ದೊರಕುವ

> ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು (2 ತಿಮೊಥೆ 4:6-8).

ತನಗೆ ಮಾತ್ರವೇ ಭರವಸೆ ಇರಬೇಕೆಂದು ಪೌಲನು ಹೇಳಲಿಲ್ಲ ಎಂಬುದನ್ನು ಗಮನಿಸಿರಿ; "ಆತನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ" ನಿತ್ಯ ರಕ್ಷಣೆಯ ಅದೇ ಭರವಸೆಯಿರುವುದು.

ಆದರೆ ಪರಲೋಕಕ್ಕೆ ಹೋಗುವದರ ಬಗ್ಗೆ ನಾವು ಹೇಗೆ ನಿಶ್ಚಿತತೆಯುಳ್ಳವರಾಗಿರಬಹುದು? ನಿತ್ಯಜೀವದ ಬಗ್ಗೆ ನಮಗೆ ಭರವಸೆ ಇರುವದರ ಮೊದಲು ನಾವು ಪಾಪರಹಿತ ಜೀವಿತ ಜೀವಿಸಬೇಕೋ? ನಾವು ಹಾಗೆ ಮಾಡಿದರೆ, ನಾವು ಎಲ್ಲರೂ ಪಾಪ ಮಾಡುವದರಿಂದ ನಮಗೆ ಯಾವುದೇ ಭರವಸೆ ಇರುವುದು ಹೇಗೆ? ಪರಲೋಕಕ್ಕೆ ಹೋಗುವದರ ಬಗ್ಗೆ ನಮಗೆ ನಿಶ್ಚಿತತೆ ಇರಲು ಒಂದೇ ಒಂದು ಮಾರ್ಗವು ದೇವರ ಕೃಪೆಯ ಮುಖಾಂತರ. ಉದಾಹರಣೆಗಾಗಿ, ಪೌಲನು ಒಬ್ಬ ಒಳ್ಳೇ ಮನುಷ್ಯ, ಒನೇಸಿಫೊರಸನ ಬಗ್ಗೆ ಹೀಗೆ ಹೇಳಿದನು, "ಒನೇಸಿಫೊರನು ಮನೆಯವರಿಗೆ ಕರ್ತನು ಕರುಣೆಯನ್ನು ತೋರಿಸಲಿ; ಅವನು ಅನೇಕಾವರ್ತಿ ನನ್ನನ್ನು ಆದರಿಸಿದನು; … ಅವನು ಆ ದಿನದಲ್ಲಿ ಕರ್ತನಿಂದ ಕರುಣೆಯನ್ನು ಹೊಂದುವಂತೆ ಕರ್ತನು ಅವನಿಗೆ ದಯಪಾಲಿಸಲಿ" (2 ತಿಮೊಥೆ 1:16, 18). ಒನೇಸಿಫೊರನು ಎಷ್ಟೋ ಒಳ್ಳೆಯವನಾಗಿದ್ದರೂ ಕರ್ತನ ಆ ದಿನದಂದು ಅವನಿಗೆ ಕರುಣೆಯ ಅಗತ್ಯತೆಯಿದೆ. ಹಾಗೆಯೇ ನಮ್ಮೆಲ್ಲರಿಗೂ ಇದೆ. ಕರುಣೆಯು ಒನೇಸಿಫೊರನಿಗೆ ಲಭ್ಯವಿದ್ದಂತೆ ಅದು ನಮಗೂ ಆ ಮಹಾ ದಿನದಂದು ಲಭ್ಯವಿದೆ ಎಂಬುದು ಶುಭವಾರ್ತೆಯಾಗಿದೆ! ಕ್ರಿಸ್ತನಿಗಾಗಿ ನಾವು ಮಾಡಬಹುದಾದ ಪ್ರತಿಯೊಂದನ್ನು ಮಾಡಿದನಂತರ, ನಾವು ಇನ್ನೂ ಅಯೋಗ್ಯ ಸೇವಕರಾಗಿದ್ದೇವೆ ನಾವಿನ್ನೂ ಕೊರತೆಯುಳ್ಳವರಾಗಿದ್ದೇವೆ, ಆದರೆ ದೇವರ ಕರುಣೆಯು ನಮಗೆ ಕೊರತೆಯಾಗಿರುವದನ್ನು ತುಂಬಿಸುವುದು!

## ಮುಕ್ತಾಯ

"Blessed Assurance" ಎಂಬುದನ್ನು ನಾವು ಹಾಡಬಹುದೋ ಹಾಗೂ ಕ್ರೈಸ್ತನು ಕೃಪೆಯಿಂದ ಬಿದ್ದು ಹೋಗಬಹುದೆಂದು ನಾವು ನಂಬಿದರೂ ನಿಜವಾಗಿಯೂ ನಮಗೆ ಭರವಸೆ ಇರಬಹುದೋ? ನಿಶ್ಚಯವಾಗಿಯೂ ನಾವು ಭರವಸೆಯಿಡಬಹುದು ಯಾಕಂದರೆ ನಾವು ಹಿಂದಿನ ಸಮಯದಲ್ಲಿ ರಕ್ಷಿಸಲ್ಪಟ್ಟಿದ್ದೇವೆ, ಅನುದಿನವೂ ರಕ್ಷಿಸಲ್ಪಡುತ್ತಿದ್ದೇವೆ, ಮತ್ತು ಪರಲೋಕದಲ್ಲಿ ಸದಾಕಾಲಕ್ಕೂ ರಕ್ಷಿಸಲ್ಪಡುತ್ತೇವೆ.

ನಮ್ಮ ರಕ್ಷಣೆಯ ಬಗ್ಗೆ ನಾವು ನಿರ್ಲಕ್ಷ್ಯತೆಯುಳ್ಳವರಾಗಿರಬೇಕೆಂದು ಅರ್ಥವಾಗುವದಿಲ್ಲ. ನಾವು ಇನ್ನೂ ಬೆಳಕಿನಲ್ಲಿ ನಡೆಯತಕ್ಕದ್ದು (1 ಯೋಹಾನ 1:7), ನಮ್ಮ ಕರೆಯುವಿಕೆಯನ್ನೂ, ಆಯ್ಕೆಯನ್ನೂ ನಿಶ್ಚಿತಪಡಿಸಿಕೊಳ್ಳಲು ಪ್ರಯಾಸಪಡಬೇಕು (2 ಪೇತ್ರ 1:10), ಮತ್ತು ಮರಣದವರೆಗೆ ನಂಬಿಗಸ್ತರಾಗಿರಲು ನಮ್ಮ ಅತ್ಯುತ್ತಮವಾದದ್ದನ್ನು ಮಾಡಬೇಕು (ಪ್ರಕಟನೆ 2:10). ಲೋಕದೊಳಗೆ ಬಿದ್ದುಹೋದ ಕ್ರೈಸ್ತನು ಇಲ್ಲವೇ ಉಗುರುಬೆಚ್ಚಗಾಗಿರುವವನು ನಾವು ಆಲೋಚಿಸಿದ ಪರಿಶುದ್ಧ ಬರಹಗಳಿಂದ ಯಾವುದೇ ಭರವಸೆಯನ್ನು ತೆಗೆದುಕೊಳ್ಳಲಾರೆನು.

ಆದರೆ ನೀನು ನಿನ್ನ ಅತ್ಯುತ್ತಮವಾದದ್ದನ್ನು ಮಾಡುತ್ತಿದ್ದರೆ, ದೇವರ ಮಗುವಾಗಿರುವದರಲ್ಲಿ ನಿನಗಾಗಿ ಮಹಾ ಭರವಸೆ ಇರುತ್ತದೆ.

ಈ ರೀತಿಯಲ್ಲಿ ಅದನ್ನು ಉದಾಹರಿಸುತ್ತೇನೆ: ನಾನು ಮಗುವಾಗಿದ್ದಾಗ, ನನ್ನ ಸುತ್ತಲೂ ನನ್ನ ತಂದೆಯಿರುವಾಗ ನಾನೆಂದೂ ಚಿಂತಿಸುತ್ತಿರಲಿಲ್ಲ. ಆತನು ಆರು ಅಡಿಗಿಂತ ಸ್ವಲ್ಪಕಡಿಮೆ ಎತ್ತರವುಳ್ಳವನೂ ಸುಮಾರು 135 ಪೌಂಡ್ ಭಾರವುಳ್ಳವನು ಆಗಿದ್ದನು; ಆದರೆ ನನ್ನ ಬಗ್ಗೆ ಸಂಬಂಧಿಸಿ ಯಾವುದೇ ವಿಷಯದ ಬಗ್ಗೆ, ಯಾವುದೇ ಸಮಸ್ಯೆಯ ಬಗ್ಗೆ, ಯಾವುದೇ ಗಂಡಾಂತರದ ಬಗ್ಗೆ ಜವಾಬ್ದಾರಿಕೆ ವಹಿಸಿಕೊಳ್ಳುತ್ತಿದ್ದನು. ಇದಲ್ಲದೇ, ಆತನು ನನ್ನನ್ನು ಪ್ರೀತಿಸಿದನು ಮತ್ತು ನನಗಾಗಿ ಉತ್ತಮವಾದದ್ದನ್ನು ಮಾಡುತ್ತಿದ್ದನು ಎಂಬುದನ್ನು ತಿಳಿದಿದ್ದೆನು. ಆದುದರಿಂದ, ನಾನು ನನ್ನ ತಂದೆಯೊಂದಿಗೆ ಇರುವಾಗಲೆಲ್ಲಾ ನಾನು ಯಾವುದಕ್ಕೂ ಭಯಪಡಬೇಕಾಗಿರಲಿಲ್ಲ. ನನಗೆ ಭರವಸೆಯ ಅದ್ಭುತಕರವಾದ ಭಾವನೆಯಿತ್ತು. ನಾನು ಬೆಳೆದಾಗಲೂ, ನನ್ನ ತಂದೆಯ ಬಲದ ಕೋಟೆ ಯಾಗಿದ್ದು ಯಾವಾಗಲೂ ನಾನು ಅವರ ಮೇಲೆ ಅವಲಂಭಿಸಬಹುದಾಗಿತ್ತು. ಬೇರೆ ಯಾವುದು ಬದಲಾದರೂ ಅವರ ಸಹವಾಸ, ಅವರ ಮೌಲ್ಯಗಳು ಮತ್ತು ಅವರ ಪ್ರೀತಿ ನನ್ನ ಜೀವನದಲ್ಲಿ ಸತತವಾಗಿದ್ದವು. ಅದು ನನಗೆ ಭರವಸೆಯನ್ನು ಕೊಟ್ಟಿತು. ಅವರ ಪ್ರೀತಿ ಮತ್ತು ಗಂಭೀರಲಕ್ಷವು ಶಿಕ್ಷಣವನ್ನೂ ಒಳಗೊಂಡಿತ್ತು. ಆದರೆ ನನ್ನ ಎಲ್ಲಾ ತಪ್ಪುಗಳಿಗೆ ಆತನ ಕ್ಷಮಾಪಣೆ ಇರುವದನ್ನು ತಿಳಿದುಕೊಂಡಿದ್ದೆನು. ಇದರಲ್ಲಿಯೂ ಸಹ, ಭರವಸೆಯು ಇತ್ತು. ನಾನು ಸರಿಯಾದ ಮಾರ್ಗಬಿಟ್ಟು ಹೋದರೆ ನನ್ನ ತಂದೆಯೂ ನನ್ನನ್ನು ಪ್ರೀತಿಸುವದಿಲ್ಲ, ಆದರೆ ಅವರ ಮಗನಾಗಿರುವ ಲಾಭಗಳನ್ನು ಕಳೆದು ಕೊಳ್ಳುವೆನೆಂದು ತಿಳಿದಿದ್ದೆನು. ಹಾಗೆ ಮಾಡುವದರ ಹತ್ತಿರಕ್ಕೂ ನಾನು ಹೋಗಲಿಲ್ಲ ಯಾಕಂದರೆ ಅವರು ನನಗೆ ಯಾವಾಗಲೂ ಬಹಳ ಒಳ್ಳೆಯವರಾಗಿದ್ದರು ಮತ್ತು ನನಗೆ ಬಹಳವಾದದ್ದನ್ನೂ ಕೊಟ್ಟಿದ್ದರು.

ಒಬ್ಬ ಒಳ್ಳೆಯ ತಂದೆಯು ಒಬ್ಬ ಮಗನಿಗೆ ಅದನ್ನು ಮಾಡಿದರೆ, ನಮ್ಮ ತಂದೆಯಂತೆ ದೇವರು ಇರುವುದು ನಮಗೆ ಎಷ್ಟೋ ಹೆಚ್ಚಾಗಿ ಭರವಸೆಯನ್ನು ಕೊಡುವದಲ್ಲವೇ (ಮತ್ತಾಯ 7:9-11)? ನಮ್ಮ ದೇವರು, ನನ್ನ ತಂದೆಯಂತೆ, ಮಿತಿಯಿಲ್ಲದಿರುವಾತನು, ನಮ್ಮ ಹಿತವನ್ನು ತನ್ನ ಹೃದಯದಲ್ಲಿಟ್ಟು ಕೊಂಡಿರುವನು, ಆತನು ನಮಗಾಗಿ ಚಿಂತಿಸುವನು, ಯಾವುದೇ ಸಮಸ್ಯೆಯ ಜವಾಬ್ದಾರಿಕೆ ತಗೆದುಕೊಳ್ಳುವಷ್ಟು ಆತನು ಬಲಶಾಲಿಯಾಗಿರುವನು. ಜೀವನದ ಬದಲಾಗುತ್ತಿರುವ ಎಲ್ಲಾ ಪರಿಸ್ಥಿತಿಗಳಲ್ಲಿ, ಆತನು ಬದಲಾಗದ ಒಬ್ಬಾತನಾಗಿರುವನು. ಅದು ಅದ್ಭುತಕರವಾದ ಭರವಸೆ ಕೊಡುವದಾಗಿರುತ್ತದಲ್ಲವೇ?

ನಾವು ತಪ್ಪು ಮಾಡುವಾಗ ಆತನನ್ನು ಮನನೋಯಿಸಿದರೂ ಆತನು ಯಾವಾಗಲೂ ಕ್ಷಮಿಸಲಿಕ್ಕೆ ಇಷ್ಟವುಳ್ಳವನಾಗಿರುತ್ತಾನೆ. ನಾವು ದೂರ ತಪ್ಪಿಹೋದರೆ ಮತ್ತು ಸಂಪೂರ್ಣ ವಾಗಿ ತಂದೆಯ ನಿರ್ದೇಶನಗಳನ್ನು ತಿರಸ್ಕರಿಸಿದರೆ, ಆತನು ನಮ್ಮನ್ನು ಪ್ರೀತಿಸುವದನ್ನು ಬಿಟ್ಟುಬಿಡುವದಿಲ್ಲ, ಆದರೆ ಪುತ್ರತ್ವದ ಲಾಭಗಳನ್ನು ನಾವು ಕಳೆದುಕೊಳ್ಳುತ್ತೇವೆ.

ಹೌದು, ದೇವರು ನಮ್ಮ ತಂದೆಯಾಗಿದ್ದಾನೆ; ನಾವು ಆತನ ಕುಟುಂಬ! ಅದು ಭರವಸೆಯಾಗಿದೆ!

ನೀನು ಕ್ರೈಸ್ತನಾಗದಿದ್ದರೆ, ನಂಬಿಕೆ ಮತ್ತು ವಿಧೇಯತೆಯಿಂದ ದೇವರ ಮಗುವಾ ದರೆ, ಈ ಭರವಸೆ ನಿನ್ನದೂ ಆಗುವುದು (ಗಲಾತ್ಯ 3:26, 27).

© 2009 Truth for Today